ಸರಿಯಾಗಿ ತಿನ್ನದೇ ಆಗಲೇ ಎರಡು ದಿನವಾಗಿತ್ತು. ಐದು ತಿಂಗಳ ಗರ್ಭದಿಂದ ಹಸಿವೆ ಸಂಕಟವಾಗಿ ಕಾಡುತ್ತಿತ್ತು. ಏನು ಮಾಡುವುದು ಎಂದು ತೋಚದೇ ಗೋಡೆ ತಲೆಯಾನಿಸಿ ಮೌನವಾಗಿ ಅಳುತ್ತಿದ್ದಾಗ ಹನುಮಂತಪ್ಪ ಬಂದು ಬಾಗಿಲು ಬಡಿದದ್ದು ಆಕೆಗೆ ಸ್ವತಃ ದೇವರೇ ಪ್ರತ್ಯಕ್ಷನಾದಷ್ಟು ಸಂತೋಷವಾಗಿತ್ತು.

ಹನುಮಂತಪ್ಪ ಸಿನಿಮಾ ಶೂಟಿಂಗಿಗೆ ಎಕ್ಸ್‌ಟ್ರಾ ನಟ ನಟಿಯರನ್ನು ಪೂರೈಸುತ್ತಿದ್ದ ಏಜೆಂಟ್. ಬಾಗಿಲು ತೆರೆದಾಗ ಹನುಮಂತಪ್ಪನನ್ನು ಕಂಡು ಏನು ಎತ್ತ ಎಂದು ಕೇಳದೇ ಲಕ್ಷ್ಮಿ ಮುಖ ಒರೆಸಿಕೊಂಡು, ಸೀರೆ ಸರಿಮಾಡಿಕೊಂಡು ಬಾಗಿಲಿಗೆ ಬೀಗ ಹಾಕಿ ಹೊರಟೇ ಬಿಟ್ಟಳು.

ಈಕೆಯ ಅವಸರವನ್ನು ನೋಡಿ ಹನುಮಂತನಿಗೂ ಆಶ್ಚರ್ಯ. ಆದರೆ, ಆತ ಬಂದಿರುವುದೇ ತನ್ನ ಯಾವುದೋ ಶೂಟಿಂಗಿಗೆ, ಅಲ್ಲಿಗೆ ಹೋಗಿ ತಲುಪಿದರೆ, ಆಗಲೇ ಹನ್ನೆರಡಾಗಿದ್ದರೂ ಏನಾದರೂ ಉಳಿದ ಬಳಿದ ತಿಂಡಿಯಾದರೂ ತಿನ್ನಬಹುದು; ಕೊನೆಯ ಪಕ್ಷ ಒಂದು ಚಹಾ ಎರಡು ಬಿಸ್ಕತ್ತಾದರೂ ಸಿಗುತ್ತದೆ ಎನ್ನುವ ಧಾವಂತ ಆಕೆಯದಾಗಿತ್ತು ಎಂದು ಹನುಮಂತನಿಗೂ ಹೊಳೆಯಲಿಲ್ಲ.

ವ್ಯಾನು ಒಂದು ಟ್ರಾಫಿಕ್ ಸಿಗ್ನಲ್ ಬಳಿ ನಿಂತಿತ್ತು. ಕಿಟಕಿಯ ಪಕ್ಕ ಕುಳಿತಿದ್ದ ಲಕ್ಷ್ಮಿ ಗರ್ಭದಲ್ಲಿದ್ದ ಮಗು ತುಸು ಚೇಷ್ಟೆ ಮಾಡಿತು, ಲಕ್ಷ್ಮಿಗೆ ಹೆಚ್ಚು ಸಂಕಟವಾಯಿತು. ಅಷ್ಟರಲ್ಲಿ ಇನ್ನೊಂದು ವ್ಯಾನು ಬಂದು ಇದರ ಪಕ್ಕದಲ್ಲಿ ನಿಂತಿತು. ಅದೂ ಇನ್ನೊಂದು ಪ್ರೊಡಕ್ಷನ್ ವ್ಯಾನ್. ಆ ವ್ಯಾನ್ ಡ್ರೈವರ್ ಎದುರುಗಡೆ ಕೂತಿದ್ದ ಹನುಮಂತನಿಗೆ ಮಾತಾಡಿಸಿದ. ಹಿಂದೆ ಕುಳಿತಿದ್ದ ಸುಂದರ ಹೆಂಗಸನ್ನು ನೋಡಿದ. ಎಕ್ಸ್‌ಟ್ರಾ ಎಂದು ಆತನಿಗೆ ಗೊತ್ತು. ಹನುಮಂತನಿಗೆ ಕಣ್ಣು ಹೊಡೆದು, 'ಏನಣ್ಣಾ, ಹೊಸ

